

ಬಾಯ್ತುಂಬಾ ತಂಬಾಕು ತುಂಬಿಕೊಂಡಿದ್ದ ಹನುಮಂತಪ್ಪ ಗದ್ದ ಮೇಲೆತ್ತಿ ಗೋಣಾಡಿಸಿ ಒಳಗೆ ಕರೆದ, ಮನಸ್ಸಿಲ್ಲದ ಮನಸ್ಸಿನಿಂದ ಎಲೆಯಡಕಿಯ ರಸ ಉಗುಳಿ ಬಂದು, 'ಗೊತ್ತಾತು ಇಸ್ಮಾಯಿಲ್‌ನ ಸೊಸಿ ವಿಚಾರ ಕೇಳಲಿಕ್ಕೆ ಬಂದೀ ಹೌದಿಲ್ಲ?' ಅಂದವನೇ ಅವಳು ಉತ್ತರಿಸುವ ಮುನ್ನವೇ ಟರ್ ಎಂದು ಮತ್ತೊಂದು ಕುರ್ಚಿ ಎಳೆದುಕೊಂಡು ಅವಳೆದುರು ಕುಳಿತ.

ಒಮ್ಮೆಲೇ 'ನಿನಗೆಷ್ಟು ವಯಸ್ಸು?' ಅಂದ.

'ಹತ್ತೊಂಬತ್ತು'

'ಅಯ್ಯೋ ಪಾಪ ಕೂಸು ನಿನಗೇನು ಹೇಳೋದು? ಹಿಂದಿನ ಮಂದಿಯ ಜೀವನಾ ಭಾಳ ಕಷ್ಟದ್ದಿತ್ತವ್ವಾ, ಹುಟ್ಟಿ ಬೆಳೆದ ನೆಲಾ ಬಿಟ್ಟ ಬರಬೇಕಾಗ್ಗಿತ್ತು....'

'ಹನುಮಂತಪ್ಪ, ಇಸ್ಮಾಯಿಲ್ ಚಾಚಾನ ಸೊಸಿ ನಸೀಮಾಳ ವಿಷಯ ಹೇಳು, ಹಳೇ ಮಂದಿಯ ಕಥಿ ಬ್ಯಾಡ' ಪ್ರಾಜಕ್ತಾ ಅಸಹನೆಯಿಂದ ಒದರಿದಳು.

'ಹುಶ್ ಸಾವಕಾಶವಾ.....ಯಾವನರೇ ಕೇಳಿಸಿ ಕೊಂಡರೆ ನನಗೆ ನಿನಗೆ ಕೂಡಿನೇ ತ್ರಾಸು. ಹಿಂದಕ್ಕೆ ಯಾರೋ ನಸೀಮಾಳ ಅಜ್ಜಿಯನ್ನು ಹೊತ್ತು ಕೊಂಡ್ಹೋಗಿದ್ದರಂತ, ಈಗ ಇಷ್ಟು ವರ್ಷದ ಮ್ಯಾಲ ಆ ಮಾತು ತಕ್ಕೊಂಡು ಜಗಳಾಡಕತ್ತಾವ ಇಸ್ಮಾಯಿಲ್ಲನ ಮನಿಮಂದಿಯೆಲ್ಲ' ಹನುಮಂತಪ್ಪ ಪಿಸುಗುಟ್ಟಿದ.

ಪ್ರಾಜಕ್ತಾಗೆ ಹನುಮಂತಪ್ಪನ ಒಗಟಿನಂಥಾ ಮಾತಿನಿಂದ ಕಿರಿಕಿರಿಯಾಗತೊಡಗಿತ್ತು. 'ಹನುಮಂತಪ್ಪಾ ನಸೀಮಾಳ ಅಜ್ಜಿಯನ್ನು ಯಾರರೇ ಹೊತ್ತುಕೊಂಡು ಹೋದರೆ ಆಕೆಯ ಗಂಡ ಅಜೀಮ ಯಾಕ ಆಕೆಯನ್ನು ಬಿಡಬೇಕು?'

'ಹಂಗಲ್ಲವ್ವಾ' ಹನುಮಂತಪ್ಪ ಅತ್ತಿತ್ತ ನೋಡಿ ಇವಳತ್ತ ಬಗ್ಗಿ ಮತ್ತೆ ಪಿಸುಗುಟ್ಟಿದ. 'ರಜಾಕರು ಹೊತ್ತುಕೊಂಡು ಹೋದಾಗ ನಸೀಮಳಜ್ಜಿ ಬಸುರಿಯಿದ್ದಿದ್ದಿಲ್ಲಂತ'

ಪ್ರಾಜಕ್ತಾಗೆ ಗೊಂದಲವಾಯ್ತು. 'ಅಂದರೆ....'

'ಅಂದರ....ಅಂದರ....ಸಣ್ಣ ಹುಡುಗಿ ನಿನಗೇನಂತ ಹೇಳೋದು? ಸಿನಿಮಾ ಪಿನಿಮಾ ನೋಡಂಗಿಲ್ಲೇನು ನೀ ಹಾಂ?' ಅಂದವ ಥಟ್ಟನೆಂದ 'ನಸೀಮಾ ಏನಿದ್ದಾಳಲ್ಲ ಅವಳಪ್ಪ ಅವಳಜ್ಜನಿಗೆ ಹುಟ್ಟಿದವನಲ್ಲವಂತೆ'.